ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **269/2020**

| | | |
|---|---|---|
| ಸಾಕ್ಷಿಯ ಹೆಸರುಃ | ಪ್ರಕಾಶ | ಪ್ರಾಸಾಃ 4 |
| ತಂದೆ/ಗಂಡನ ಹೆಸರುಃ | ಮಲ್ಲಯ್ಯ | ಚಾಸಾಃ 2 |
| ವಯಸ್ಸು ಃ | 30 ವರ್ಷ | ದಿಃ 24-01-2026 |
| ಉದ್ಯೋಗಃ | ಚಾಲಕ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಮಾದ್ವಾರ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ

ನನಗೆ ಚಾಸಾಃ 3 ರವರ ಪರಿಚಯ ಇದೆ. ನನಗೆ ಆರೋಪಿತರ ಪರಿಚಯ ಇಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನುಡಿದಿರುವುದಿಲ್ಲ. ಯಾವ ದಿನದಂದು ಏನು ಆಗಿದೆ ಎಂದು ಗೊತ್ತಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನಮ್ಮ ತೋರಿಸಲಾಗಿ ಅದು ಜಪ್ತಿ ಪಂಚನಾಮೆಯಾಗಿದ್ದು ಅದನ್ನು ಸಾಕ್ಷಿಯು ನೋಡಿ ಗುರುತಿಸಿರುವುದರಿಂದ ಅದನ್ನು ಈಗಾಗಲೇ ನಿಪಿ-1 ಎಂದು, ಸಾಕ್ಷಿಯ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಏನು ಬರೆದಿರುತ್ತಾರೆ ಎಂಬುದರ ಬಗ್ಗೆ ಮಾಹಿತಿ ನನಗೆ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸರಕಾರಿ ಸಹಾಯಕ ಅಭೀಯೋಜಕರವರು ಪಾಟಿ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು ನ್ಯಾಯಾಲಯದ ಮುಂದೆ ಇರುವ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

ದಿನಾಂಕ 17-12-2019 ರಂದು ನನಗೆ ಮತ್ತು ಚಾಸಾಃ 3 ರವರನ್ನು ಪೋಲಿಸರು ಜಪ್ತಿ ಪಂಚನಾಮೆ ಸಾಕ್ಷಿದಾರಾಗಿ ಕರೆಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮದಲ್ಲಿ ನಿಪಿ-1 ರಂತೆ ಜಪ್ತಿ ಪಂಚನಾಮೆ ಜರುಗಿಸಿರುತ್ತಾರೆ ಅಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ ಇಲ್ಲ

ಮರು ವಿಚಾರಣೆಃ ಇಲ್ಲ

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ